ಇ) ಟ್ರ್ಯಾಕ್ಟರ್‌ಗೆ ಮಾತ್ರ ಸಹಾಯಧನ ನೀಡುವುದನ್ನು ಸ್ಥಗಿತಗೊಳಿಸಿ ಇತರೆ ಕೃಷಿ ಯಂತ್ರೋಪಕರಣಗಳಿಗೆ ಸಹಾಯಧನ ವಿತರಿಸಲು ಅವಕಾಶ ಕಲ್ಪಿಸಲಾಗಿದೆ.

ಈ) ಆಯವ್ಯಯದ ಹೆಚ್ಚಿನ ಅನುದಾನವನ್ನು ಟ್ರ್ಯಾಕ್ಟರ್‌ಗಳಿಗೆ ಸಹಾಯಧನ ನೀಡುವಲ್ಲಿ ವಿನಿಯೋಗಿಸುವುದನ್ನು ತಪ್ಪಿಸಿ, ಉತ್ಪಾದನೆ ಹೆಚ್ಚಿಸುವಂತಹ ಹಾಗೂ ರೈತರಿಗೆ ಉಪಯೋಗವಾಗುವಂತಹ ಕೃಷಿ ಯಂತ್ರೋಪಕರಣಗಳಿಗೆ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿದೆ.

SFC ಯೋಜನೆಯಲ್ಲಿ ಅನುದಾನ

1018 (648) ಶ್ರೀ ರುದ್ರೇಶಗೌಡ ವೈ.ಎನ್. (ಬೇಲೂರು) : ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯ ಬೇಲೂರು ಪುರಸಭೆಗೆ ಎಸ್.ಎಫ್.ಸಿ. ಯೋಜನೆಯಲ್ಲಿ 2010–11ನೇ ಸಾಲಿನಲ್ಲಿ ನಿಗದಿಪಡಿಸಿದ ಅನುದಾನ ಎಷ್ಟು;

ಆ) ಇತರೆ ಪುರಸಭೆಗೆ ಹೋಲಿಸಿದ್ದಲ್ಲಿ ಪ್ರವಾಸೋದ್ಯಮ ಕೇಂದ್ರವಾದ ಬೇಲೂರಿಗೆ ನಿಗದಿಪಡಿಸಿದ ಅನುದಾನ ಕಡಿಮೆಯಾಗಿರುವುದಿಲ್ಲವೆ;

ಇ) ಅನುದಾನ ಬಿಡುಗಡೆ ಮಾಡಲು ಇರುವ ಮಾನದಂಡವೇನು?

ಶ್ರೀ ಬಾಲಚಂದ್ರ ಲ. ಜಾರಕಿಹೋಳಿ (ಪೌರಾಡಳಿತ, ಸ್ಥಳೀಯ, ಸಂಸ್ಥೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು) :

ಅ) ರೂ.164.90 ಲಕ್ಷಗಳು.

ಆ) ಸರ್ಕಾರದ ಆದೇಶ ಸಂಖ್ಯೆ:ನಅಇ/121/ಎಸ್‌ಎಫ್‌ಸಿ/05, ದಿನಾಂಕ: 12–04–2006ರಲ್ಲಿನ ಹಂಚಿಕಾಸೂತ್ರದನ್ವಯ ಅನುದಾನವನ್ನು ನಿಗದಿಪಡಿಸಲಾಗಿರುತ್ತದೆ.

ಇ) ಈ ಕೆಳಕಂಡ ಹಂಚಿಕಾಸೂತ್ರದನ್ವಯ ನಿಗಧಿಪಡಿಸಿ, ಅನುದಾನ ಬಿಡುಗಡೆ ಮಾಡಲಾಗುತ್ತಿದೆ.

ಕ್ರ. ಸಂ.	ಸೂಚಕ -	ಶೇಕಡವಾರು ತೂಕ
1	ಜನಸಂಖ್ಯೆ	40%
2	ವಿಸ್ತೀರ್ಣ	15%
3	ರಸ್ತೆ ಉದ್ದಳತೆ	10%
4	ಅನಕ್ಷರತೆ	15%
5	ನಿರ್ವಹಣಾ ವೆಚ್ಚ ಮತ್ತು ತಲಾ ಆಸ್ತಿ ತೆರಿಗೆ ಮೇಲಿನ ಬೇಡಿಕೆ ನಿವ್ವಳ ಸಾಮಾನ್ಯ ಅಂತರ	20%
	ಒಟ್ಟು	100%

ಕರ್ನಾಟಕ ಜಲಮಂಡಳಿಯವರ ಕಳಪೆ ಕಾಮಗಾರಿ

1019 (649) ಶ್ರೀ ರುದ್ರೇಶಗೌಡ ವೈ.ಎನ್. (ಬೇಲೂರು) : ಮಾನ್ಯ ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾಸನ ಜಿಲ್ಲೆಯ ಬೇಲೂರು ನಗರಕ್ಕೆ ಕರ್ನಾಟಕ ಜಲಮಂಡಳಿಯಿಂದ ತ್ವರಿತ ನೀರು ಸರಬರಾಜು ಯೋಜನೆ ಮಂಜೂರಾಗಿರುವುದು ನಿಜವೆ;

ಆ) ಮಂಜೂರಾಗಿದ್ದಲ್ಲಿ, ಕಾಮಗಾರಿ ಕಳಪೆಯಾಗಿರುತ್ತದೆ ಎಂದು ಸಾರ್ವಜನಿಕರು ದೂರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಕಳಪೆ ಕಾಮಗಾರಿಯಾಗಿದ್ದಲ್ಲಿ ಸರ್ಕಾರ ಕಾನೂನು ರೀತಿ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು) :

ಅ) ನಿಜ.

ಆ) ಕಾಮಗಾರಿಗಳ ಬಗ್ಗೆ ಈವರೆಗೆ ಸಾರ್ವಜನಿಕರಿಂದ ಕಳಪೆ ಕಾಮಗಾರಿಯಾಗಿದೆಯೆಂದು ಯಾವುದೇ ದೂರುಗಳು ಬಂದಿರುವುದಿಲ್ಲ.

ಇ) ಅನ್ವಯಿಸುವುದಿಲ್ಲ.